ಸ್ಥಳೀಯ ಅಭ್ಯರ್ಥಿಗಳ ಖಾಯಂ ನೇಮಕಾತಿ

1726 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ 1984 ರಿಂದ ಸ್ಥಳೀಯ ಅಭ್ಯರ್ಥಿಗಳೆಂದು ನೇಮಕಾತಿಗಾಗಿ ಇನ್ನೂ ಖಾಯಂ ಆಗದೆ ಉಳಿದಿರುವ ಸಂಖ್ಯೆ ಎಷ್ಟು?

ಆ) ಈ ಪೈಕಿ ಹತ್ತು ವರ್ಷಗಳ ಸೇವೆ ಸಲ್ಲಿಸಿದವರನ್ನು ಖಾಯಂಗೊಳಿಸಲಾಗಿದೆಯೇ?

ಇ) ಸ್ಥಳೀಯ ಅಭ್ಯರ್ಥಿಗಳಲ್ಲಿ ಎಷ್ಟು ಮಂದಿಯನ್ನು ಖಾಯಂಗೊಳಿಸಲಾಗಿದೆ?

ಈ) ಉಳಿದವರ ಕುರಿತು ಸರ್ಕಾರದ ನಿಲುವು ಏನು, ಖಾಯಂಗೊಳಿಸುವಲ್ಲಿ ಅನುಸರಿಸಲಾದ ನಿಯಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಉಚ್ಚ ನ್ಯಾಯಾಲಯವು ಸ್ಥಳೀಯ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿತ್ತು. ಅದರಂತೆ, ದಿನಾಂಕ 5-7-1983 ರ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 7 ಎಸ್ಎಲ್ಸಿ 83ರಲ್ಲಿ ಸರ್ಕಾರವು, ದಿನಾಂಕ 5-7-83 ರಿಂದ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿ ಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಆದುದರಿಂದ, ಆ ದಿನಾಂಕದ ನಂತರ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡುವ ಹಾಗೂ ಅವರನ್ನು ಖಾಯಂ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಇ) ಮತ್ತು ಐಟಂ (ಅ)ಗೆ ನೀಡಿದ ಉತ್ತರ ದಿಂದ ಐಟಂ (ಆ) ದಿಂದ (ಈ) ಉದ್ಭವಿಸುವುದಿಲ್ಲ.

ಸುರತ್ಕಲ್ ಕ್ಷೇತ್ರದಲ್ಲಿ ವಿವಿಧ ಕಾಮಗಾರಿಗಾಗಿ ಹಣ ಮಂಜೂರಾತಿ

1727 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಸಣ್ಣ ನೀರಾವರಿಗಾಗಿ ಆಯವ್ಯಯದಲ್ಲಿ ನಿಗದಿಪಡಿಸಲಾದ ಮೊತ್ತವೆಷ್ಟು ಹಾಗೂ ಜಿಲ್ಲಾವಾರು ಹಂಚಿಕೆ ಎಷ್ಟು? (ವಿವರ ನೀಡುವುದು)

ಆ) ಸುರತ್ಕಲ್ ಕ್ಷೇತ್ರದಲ್ಲಿ 1996-97ನೇ ಸಾಲಿಗಾಗಿ ನಿಗದಿಪಡಿಸಲಾದ ಕಾಮಗಾರಿಗಳು ಯಾವುವು ಹಾಗೂ ಅದಕ್ಕೆ ಮೀಸಲಿಟ್ಟ ಮೊತ್ತವೆಷ್ಟು? ಅಪೂರ್ಣ ಹಾಗೂ ಪೂರ್ಣಗೊಂಡ ಕಾಮಗಾರಿಗಳ ಹಾಗೂ ಆರಂಭಗೊಳ್ಳದೆ ಉಳಿದಿರುವ ಕಾಮಗಾರಿಗಳ ವಿವರಗಳನ್ನು ನೀಡುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.) :

ಅ) ನಿಗದಿಪಡಿಸಿದ ಹಾಗೂ ಹಂಚಿಕೆಯಾದ ಮೊತ್ತ 9938.01 ಲಕ್ಷ ರೂ.ಗಳು. ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ಆ) 32 ಕಾಮಗಾರಿಗಳಿಗೆ 50.22 ಲಕ್ಷ ರೂ.ಗಳ ಅನುದಾನವಿದೆ

ಪೂರ್ಣಗೊಂಡಿರುವ ಕಾಮಗಾರಿಗಳು	:	16
ಕಾರ್ಯಗತದಲ್ಲಿರುವ "	:	3
ಇನ್ನೂ ಪ್ರಾರಂಭವಾಗಬೇಕಾಗಿರುವ ಕಾಮಗಾರಿಗಳು.	:	13

(ವಿವರಗಳನ್ನು ಅನುಬಂಧ - 2 ರಲ್ಲಿ ಲಗತ್ತಿಸಿದೆ).

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	1996-97ನೇ ಸಾಲಿನಲ್ಲಿ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ
1	2	3
1)	ಬೆಂಗಳೂರು ನಗರ ಮತ್ತು ಗ್ರಾಮಾಂತರ	800.64
2)	ಕೋಲಾರ	228.26
3)	ಚಿತ್ರದುರ್ಗ	334.39
4)	ಶಿವಮೊಗ್ಗ	542.83
5)	ತುಮಕೂರು	367.77
6)	ಮೈಸೂರು	418.00
7)	ಮಂಡ್ಯ	143.55
8)	ಹಾಸನ	107.60
9)	ಚಿಕ್ಕಮಗಳೂರು	110.24
10)	ದಕ್ಷಿಣ ಕನ್ನಡ	641.43
11)	ಕೊಡಗು	45.49
	ಇಡುಗಂಟು	789.66
12)	ಬೆಳಗಾಂ	512.84
13)	ಧಾರವಾಡ	776.85
14)	ಉತ್ತರ ಕನ್ನಡ	1100.18
15)	ಬಿಜಾಪುರ	1010.45
16)	ಗುಲ್ಬರ್ಗಾ	359.00
17)	ಬೀದರ್	669.00
18)	ರಾಯಚೂರು	604.87
19)	ಬಳ್ಳಾರಿ	375.16
	ಒಟ್ಟು	**9938.01**

ಮಂಗಳೂರು ತಾಲ್ಲೂಕಿನ ಸುರತ್ಕಲ್ ಕ್ಷೇತ್ರದಲ್ಲಿ 1996-97ನೇ ಸಾಲಿನ ಆಯವ್ಯಯದಲ್ಲಿ ಸೇರಿರುವ ಕಾಮಗಾರಿಗಳ ವಿವರಗಳು.

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	1996-97ರ ಅನುದಾನ	3:96ರ ವರೆಗಾದ ವೆಚ್ಚ	1996-97ನೇ ಸಾಲಿನಲ್ಲಿ ಆದ ವೆಚ್ಚ	ಕಾಮಗಾರಿಗೆ ಇದುವರೆಗೆ ಆದ ವೆಚ್ಚ	ಷರಾ
1	2	3	4	5	6	7	8
	ಪೂರ್ಣಗೊಂಡ ಕಾಮಗಾರಿಗಳು :						
	4702 ಕೆರೆ ಕಲ್ಯಾಣ :						
1.	ಕಾವೂರು ಕೆರೆಯ ಜೀರ್ಣೋದ್ಧಾರ	5.00	0.10	2.90	0.89	3.79	ಕಾಮಗಾರಿ ಪೂರ್ಣಗೊಂಡಿದೆ.
	4711-01-ಪ್ರವಾಹ ನಿಯಂತ್ರಣ ಯೋಜನೆಗಳು :						
1.	ಅಡ್ಯಾರು ಕಣ್ಣೂರು ಗ್ರಾಮದಲ್ಲಿ ನೇತ್ರಾವತಿ ನದಿಯ ಬಲದಂಡೆ ಕೊರತಕ್ಕೆ ಸ್ಪರ್ಸ್ ನಿರ್ಮಾಣ. ಸ್ಪರ್ 3 ಮತ್ತು 4.	28.00	0.50	26.99	-	26.99	-"-
2.	ಬೊಕ್ಕಪಟ್ನ ಬೆಂಗ್ರೆ ಎಂಬಲ್ಲಿ ಗುರುಪುರ ನದಿಯ ಬಲದಂಡೆ ಕೊರೆತಕ್ಕೆ ಸಂರಕ್ಷಣಾ ಕಾಮಗಾರಿ ಚೈ : 400-500 ಮಿ.	3.40	-	3.07	-	3.07	-"-
3.	ಸುರತ್ಕಲ್ ಗ್ರಾಮದ ಆಗಿಲ ಪರಂಬೋಕು ತೋಡು ಕೊರೆತಕ್ಕೆ ತಡೆಗೋಡೆ ನಿರ್ಮಾಣ.	2.00	1.00	0.13	2.10	2.23	-"-

1	2	3	4	5	6	7	8
4.	ಬೊಕ್ಕಪಟ್ನ ಬೆಂಗ್ರೆ ಎಂಬಲ್ಲಿ ಗುರುಪುರ ನದಿಯ ಕೊರೆತಕ್ಕೆ ಸಂರಕ್ಷಣಾ ಕಾಮಗಾರಿ ಚೈ : 300-400 ಮಿ.	3.40	0.40	0.02	2.95	2.97	-"-
5.	ಅಡ್ಯಾರು ಕಣ್ಣೂರು ಗ್ರಾಮದ ಯುಸೂಫ್ ನಗರದ ಬಳಿ ಕಲ್ಲು ಕಟ್ಟಣೆ ರಚನೆ ಚೆ:500-700 ಮಿ.	10.00	2.00	2.35	9.03	11.38	-"-
6.	ಅಡ್ಯಾರು ಗ್ರಾಮದ ಮದರನತುಲ್ ಹಸನೀಯ ಕಟ್ಟಡಕ್ಕೆ ಪ್ರವಾಹ ನಿಯಂತ್ರಣ ಕಾಮಗಾರಿ.	10.00	0.07	3.99	7.10	11.09	-"-
	4711-02-ಸಮುದ್ರ ಕೊರೆತ ತಡೆ ಕಾಮಗಾರಿಗಳು :						
7.	ಮುಕ್ಕಾ ಎಂಬಲ್ಲಿ ಸಮುದ್ರ ಕೊರೆತ ತಡೆ ಕಾಮಗಾರಿ ಗಳು ಚೈ :31.50 - 31.70 ಕಿ.ಮಿ.	26.65	-	27.78	-	27.78	ಕಾಮಗಾರಿ ಪೂರ್ಣಗೊಂಡಿದೆ.
8.	-ಅದೇ- ಚೈ : 31.70 - 31.82 ಕಿ.ಮಿ.	16.04	0.10	16.79	-	16.79	-"-
9.	ಸಸಿಹಿತ್ಲು ಎಂಬಲ್ಲಿ ಸಮುದ್ರ ಕೊರೆತೆ ತಡೆ ಕಾಮಗಾರಿ ಚೈ 32.035 - 32.195 ಕಿ.ಮಿ.	19.80	0.10	21.83	0.63	22.46	-"-
10.	-ಅದೇ- ಚೈ : 32.195 - 32.295 ಕಿ.ಮಿ.	13.30	0.10	12.86	0.28	13.64	-"-
11.	ಗುಡ್ಡಕೊಪ್ಪಲ ಎಂಬಲ್ಲಿ ಸಮುದ್ರ ಕೊರೆತ ತಡೆ ಕಾಮಗಾರಿ ಚೈ : 27.826-27.926 ಕಿ.ಮಿ.	13.30	-	12.84	0.80	13.64	-"-
12.	-ಅದೇ- ಚೈ : 27.726 - 27.826 ಕಿ.ಮಿ.	13.30	0.10	12.48	1.98	14.46	-"-

1	2	3	4	5	6	7	8
13.	ಕುಳಾಯಿ ಎಂಬಲ್ಲಿ ಸಮುದ್ರಕೊರೆತ ತಡೆ ಕಾಮಗಾರಿ ಚೈ : 24.55 - 24.65 ಕಿ.ಮಿ.	12.70	-	12.43	-	12.43	-"-
14.	ಸಸಿಹಿತ್ಲು ಗ್ರಾಮದ ಅಜ್ಜದಕೆರೆಯ ಎಂಬಲ್ಲಿ ನದಿ ಕೊರೆತ ಸಂರಕ್ಷಣಾ ಕಾಮಗಾರಿ ಚೈ: 450-1050 ಮಿ.	8.35	-	8.08	-	8.08	-"-
15.	ಮರವೂರು ಪಡುಶೆಡ್ಡೆ ಎಂಬಲ್ಲಿ ನದಿದಂಡೆ ಸಂರಕ್ಷಣಾ ಕಾಮಗಾರಿ ಚೈ :0-150 ಮಿ.	8.00	-	7.82	-	7,82	-"-
16.	-ಅದೇ- ಚೈ 150 -300 ಮಿ.	8.00	-	7.72	-	7.72	-"-
2.	**ಪ್ರಗತಿಯಲ್ಲಿರುವ ಕಾಮಗಾರಿಗಳು :**						
	4711-01-ಪ್ರವಾಹ ನಿಯಂತ್ರಣ ಯೋಜನೆಗಳು :						
17.	ಬೊಕ್ಕಪಟ್ಣ ಬೆಂಗ್ರೆ ಎಂಬಲ್ಲಿ ಗುರುಪುರ ನದಿಯ ಕೊರೆತಕ್ಕೆ ಸಂರಕ್ಷಣಾ ಕಾಮಗಾರಿ ಚೈ : 200-300 ಮಿ.	3.40	0.50	0.01	1.06	1.07	ಕಾಮಗಾರಿ ಪ್ರಗತಿಯಲ್ಲಿದೆ.
	4711-02-ಸಮುದ್ರ ಕೊರೆತ ತಡೆ ಕಾಮಗಾರಿಗಳು :						
18.	ಮುಕ್ಕಾ ಎಂಬಲ್ಲಿ ಸಮುದ್ರ ಕೊರೆತ ತಡೆ ಕಾಮಗಾರಿ ಚೈ : 30.65 - 31.35 ಕಿ.ಮಿ.	96.00	2.00	40.25	17.23	57.48	-"-
19.	-ಅದೇ- ಚೈ : 31.30-31.50 ಕಿ.ಮಿ.	29.80	3.00	8.44	13.32	21.76	-"-
	ಪ್ರಾರಂಭಗೊಳ್ಳದೆ ಉಳಿದ ಕಾಮಗಾರಿಗಳು :						

1	2	3	4	5	6	7	8
	4711-01-ಪ್ರವಾಹ ನಿಯಂತ್ರಣ ಯೋಜನೆಗಳು :						
20.	ಗುರುಪುರ ನದಿಯ ಎಡದಂಡೆಯಲ್ಲಿ ಒಟ್ಟು ರಸ್ತೆ ನಿರ್ಮಾಣ	26.00	5.00	0.10	0.01	0.11	ಕರಡು ಟೆಂಡರ್ ಪರಿಶೀಲನೆಯಲ್ಲಿದೆ.
21.	ಮುಕ್ತ ಎಂಬಲ್ಲಿ ಸಮುದ್ರಕೊರೆತ ತಡೆ ಕಾಮಗಾರಿ ಚೈ : 31.82-32.035 ಕಿ.ಮಿ.	32.80	2.00	6.83	0.16	7.09	ಟೆಂಡರ್ ಕಾಮಗಾರಿ ಪ್ರಾರಂಭಿಸ ಬೇಕಾಗಿದೆ.
22.	ಹೊಸಬೆಟ್ಟು ಎಂಬಲ್ಲಿ ಸಮುದ್ರಕೊರೆತ ತಡೆ ಕಾಮಗಾರಿ ಚೈ : 25.75-25.85 ಕಿ.ಮಿ.	16.00	2.00	-	0.73	0.73	-"-
23.	-ಅದೇ-ಚೈ : 25.65-25.75 ಕಿ.ಮಿ.	16.50	2.00	0.36	0.73	1.09	-"-
24.	ಗುಡ್ಡಕೊಪ್ಪಳ ಎಂಬಲ್ಲಿ ಸಮುದ್ರಕೊರೆತ ತಡೆ ಕಾಮಗಾರಿ ಚೈ : 27.26 - 28.06 ಕಿ.ಮಿ.	23.00	2.00	-	1.03	1.03	-"-
25.	ದೊಡ್ಡಕೊಪ್ಪಳ ಎಂಬಲ್ಲಿ ಸಮುದ್ರ ಕೊರೆತ ತಡೆ ಕಾಮಗಾರಿ ಚೈ : 28.55-29.75 ಕಿ.ಮಿ.	36.30	11.10	-	1.47	1.47	-"-
	4711-01 ಪ್ರವಾಹ ನಿಯಂತ್ರಣ ಯೋಜನೆಗಳು						
26.	ಕೆಮ್ರಾಲ್ ಮುಲ್ಪಟ್ಟಿಯಿಂದ ಅತ್ತೂರುಕಬೈಲು ವರೆಗೆ ಹೊಳೆ ಕೊರೆತಕ್ಕೆ ಕಲ್ಲುಕಟ್ಟಡ ನಿರ್ಮಾಣ.	10.00	0.01	-	-	-	ಅಂದಾಜಿಗೆ ಮಂಜೂರಾತಿ ದೊರೆಯಬೇಕಾಗಿದೆ.

1	2	3	4	5	6	7	8
27.	ಅಡ್ಯಾರು ಕಣ್ಣೂರು ಗ್ರಾಮದ ಯುಸೂಫ್ ನಗರದ ಬಳಿ ನೇತ್ರಾವತಿ ನದಿಗೆ ಸ್ಪರ್ಸ್ ನಿರ್ಮಾಣ.	30.00	0.01	-	-	-	-"-
	4711-02-ಸಮುದ್ರ ಕೊರೆತ ತಡೆ ಕಾಮಗಾರಿಗಳು :						
28.	ಹೊಸಬೆಟ್ಟು ಎಂಬಲ್ಲಿ ಸಮುದ್ರ ಕೊರೆತ ತಡೆ ಕಾಮಗಾರಿ ಚೈ : 25.85 - 25.95 ಕಿ.ಮಿ.	16.50	5.00	-	-	-	ಅಂದಾಜಿಗೆ ಮಂಜೂರಾತಿ ದೊರಕಬೇಕಾಗಿದೆ.
29.	ದೊಡ್ಡ ಕೊಪ್ಪಲ ಎಂಬಲ್ಲಿ ಸಮುದ್ರ ಕೊರೆತ ತಡೆ ಕಾಮಗಾರಿ ಚೈ : 29.03-29.23 ಕಿ.ಮಿ.	37.00	11.10	-	-	-	-"-
30.	-ಅದೇ-ಚೈ : 29.35-29.55 ಕಿ.ಮಿ.	37.00	0.01	-	-	-	-"-
31.	ಗುಡ್ಡಕೊಪ್ಪಳ ಎಂಬಲ್ಲಿ ಸಮುದ್ರಕೊರೆತ ತಡೆ ಕಾಮಗಾರಿ, ಚೈ : 28.07-28.27 ಕಿ.ಮಿ.	37.00	0.01	-	-	-	-"-
32.	ಕೊಳುವೈಲು ಸಸಿಹಿತ್ಲು ಎಂಬಲ್ಲಿ ಉಷ್ಣ ನೀರು ತಡೆ ಅಣೆಕಟ್ಟು.	60.00	0.01	-	-	-	-"-
	ಒಟ್ಟು	**708.54**	**50.22**	**236.32**	**61.50**	**297.82**	